# ಹೊಸತನ್ನು ಕಲಿಯುವ ಹಂಬಲ

## ಛಾಯಾ ಸಿಂಗ್
### ಉದಯದ ‘ನಂದಿನಿ’ಯ ನಂದಿನಿ



◆ **ನಿಮ್ಮ ಪರಿಚಯವನ್ನು ಹೇಳಿ...**

ನಮ್ಮ ತಂದೆ ಮೂಲತಃ ಉತ್ತರಪ್ರದೇಶದವರು. ಅವರು ಬೆಂಗಳೂರಿಗೆ ಬಂದು 45 ವರ್ಷಗಳೇ ಆಗಿವೆ. ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಈಗ ಚೆನ್ನೈಯಲ್ಲಿ ನೆಲೆಸಿದ್ದೇನೆ. ತಂದೆ ಗೋಪಾಲಸಿಂಗ್, ಉದ್ಯಮಿ ಅವರಿಗೆ ನಾನು ಸಿನಿಮಾರಂಗ ಪ್ರವೇಶಿಸುವುದು ಮೊದಲು ಅಷ್ಟು ಇಷ್ಟ ಇರಲಿಲ್ಲ. ಏಕೆಂದರೆ ನಾವು (ರಜಪೂತ ಠಾಕೂರ್) ತುಂಬ ಸಂಪ್ರದಾಯಸ್ಥರು. ಹೆಣ್ಣುಮಕ್ಕಳನ್ನು ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿಕೊಡುತ್ತಾರೆ. ನಮ್ಮ ಮನೆಯಲ್ಲಿ ಮಾತ್ರ ನನಗೆ ಓದಿಸಿದರು. ನನ್ನ ಆಸಕ್ತಿಯನ್ನು ಪೊರೆದವರು ನನ್ನ ತಾಯಿ. ತನ್ನ ಮಗಳಿಗೆ ಅವಕಾಶವೇ ಹುಡುಕಿಕೊಂಡು ಬಂದಾಗ ಏಕೆ ನಿರಾಕರಿಸಬೇಕು ಎನ್ನುವ ವಾದ ಅವರದಾಗಿತ್ತು. ನಮ್ಮ ಬಂಧು ಬಳಗವನ್ನು ಲೆಕ್ಕಿಸದೆ ಅವರು ನನ್ನ ಬೆನ್ನಿಗೆ ನಿಂತರು. ‘ಸಮಾಧಾನ’ ಎನ್ನುವ ಧಾರಾವಾಹಿಗೆ ಅವಕಾಶ ಸಿಕ್ಕಿತು. ಅದರಲ್ಲಿ ಮುಂದುವರಿಯಲು ಆಗಲಿಲ್ಲ. ನನಗೆ ನಟನೆ ಗೊತ್ತಿಲ್ಲ ಎನ್ನುವುದೇ ಅದಕ್ಕೆ ಮುಖ್ಯ ಕಾರಣವಾಯಿತು. ಈ ಕೊರತೆಯನ್ನೇ ಸವಾಲಾಗಿ ಇಟ್ಟುಕೊಂಡು ನಾನು ನಟನೆಯನ್ನು ಕಲಿತು ಸಿನಿಮಾ– ಧಾರಾವಾಹಿಗಳಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು.

◆ **ನಿಮ್ಮ ಸ್ಟಾರ್ ಜೀವನ ನಿಮ್ಮಲ್ಲಿ ತಂದ ಬದಲಾವಣೆ ಏನು ಎಂದು ಹೇಳಬಹುದಾ?**

ಸ್ಟಾರ್ ಲೈಫ್ ಇವತ್ತು ಇದ್ದಿದ್ದು ನಾಳೆ ಇರಲ್ಲ. ನಾನು ಒಬ್ಬ ಕಲಾವಿದೆ, ನನ್ನ ಕೆಲಸ ನನಗೆ ಮುಖ್ಯ. ಅದನ್ನು ಶ್ರದ್ಧೆಯಿಂದ ಮಾಡಿದರೆ ಗೌರವ ಇದ್ದೇ ಇರುತ್ತದೆ. ನಾನಾಯಿತು ನನ್ನ ಓದಾಯಿತು ಎನ್ನುವ ಹುಡುಗಿ. ನನಗೆ ಸ್ನೇಹಿತರು ತುಂಬ ಸೀಮಿತ. ನನ್ನ ಪಾಡಿಗೆ ನಾನು ಇರುತ್ತೇನೆ. ನನ್ನ ಕೆಲಸವನ್ನು ಮೊದಲ ದಿನ ಹೇಗೆ ಶ್ರದ್ಧೆಯಿಂದ ಮಾಡುತ್ತಿದ್ದೆನೋ ಅದನ್ನು ಇವತ್ತೂ ಹಾಗೆಯೇ ಮಾಡುತ್ತಿದ್ದೇನೆ. ನಿರ್ದಿಷ್ಟ ಕೆಲಸ ಇಲ್ಲದೆ ಮನೆಯಿಂದ ಹೊರಗೆ ಸಮಯವನ್ನು ಕಳೆಯುವುದಿಲ್ಲ.

◆ **ನಿಮ್ಮ ಫ್ಯಾಶನ್ ಬಗ್ಗೆ ಹೇಳಬಹುದಾ?**

ಓದಿನ ಜೊತೆ ಸಿನಿಮಾ ನೋಡುವ ಹವ್ಯಾಸ ಇದೆ. ಬೇರೆ ಬೇರೆ ಭಾಷೆಗಳ ಸಿನಿಮಾಗಳನ್ನು ನೋಡುತ್ತೇನೆ. ನನ್ನ ಪತಿ ಕೃಷ್ಣ ಅವರೂ ಕಲಾವಿದರು. ಸನ್ ಟೀವಿಯ ‘ರನ್’ ಎಂಬ ಧಾರಾವಾಹಿಯಲ್ಲಿ ಈಗ ಇಬ್ಬರೂ ನಟಿಸುತ್ತಿದ್ದೇವೆ. ನಮ್ಮಿಬ್ಬರ ಅಭಿರುಚಿಯಲ್ಲಿಯೂ ಸಾಮ್ಯತೆ ಇದೆ. ಹೊಸದನ್ನು ಕಲಿಯುವ ಹಂಬಲ ನಮಗಿದೆ. ಬಿಡುವಿನ ವೇಳೆ ಕಲಿಕೆಗೆ ಮೀಸಲಾಗಿಡುತ್ತೇವೆ. ಹಲವು ದಿನಗಳ ಹಿಂದೆ ಈಜುವುದನ್ನು ಕಲಿತೆ. ನಾವಿಬ್ಬರೂ ಬ್ಯಾಡ್ಮಿಂಟನ್ ಕಲಿತೆವು. ಸ್ಕೇಟಿಂಗ್ ಅಭ್ಯಾಸ ಮಾಡಿದೆ ಹೀಗೆ ಏನಾದರೂ ಮಾಡುತ್ತಿರುತ್ತೇವೆ. ಒಳ್ಳೆಯ ಆತ್ಮಸಂಗಾತಿ ಸಿಕ್ಕಿದ್ದಾರೆ.

◆ **ಸಿನಿಮಾ– ಧಾರಾವಾಹಿ ನಡುವಿನ ಒಡನಾಟದ ಬಗ್ಗೆ ಹೇಳುವುದಾದರೆ...**

ದೇವರು ನನ್ನ ಬಗ್ಗೆ ತುಂಬ ಕರುಣೆಯನ್ನು ತೋರಿಸಿದ್ದಾನೆ. ನಾನು ತುಂಬ ಅದೃಷ್ಟವಂತೆ. ಒಳ್ಳೆಯ ಅವಕಾಶದ ಜೊತೆ ಒಳ್ಳೆಯ ಜನರ ಜೊತೆ ಕೆಲಸ ಮಾಡುವ ಭಾಗ್ಯ ಸಿಕ್ಕಿದೆ. ಕೆಲವರಿಗೆ ಕಹಿ ಅನುಭವಗಳೂ ಆಗಿರುತ್ತವೆ. ಸುಮಾರು 18 ವರ್ಷಗಳ ಪಯಣದಲ್ಲಿ ಅಂತಹ ಒಂದೇ ಒಂದು ಕಹಿ ಅನುಭವ ನನಗೆ ಆಗಿಲ್ಲ. ನಾನು ಮೊದಲು ಬಣ್ಣ ಹಚ್ಚಿದ್ದು ಪಿ. ಶೇಷಾದ್ರಿ ಅವರ ‘ಮುನ್ನುಡಿ’ ಎಂಬ ಸಿನಿಮಾದಲ್ಲಿ ತಾರಾ ಅವರ ಮಗಳಾಗಿದ್ದೆ. ‘ಚಿಟ್ಟೆ’ಯ ಮೂಲಕ ನಾಯಕಿಯಾಗಿ ಪ್ರವೇಶ ಪಡೆದೆ. ಈಗ ಟೀವಿಗೆ ಬಂದಿದ್ದೇನೆ. ಕಿರುತೆರೆ– ಹಿರಿತೆರೆ ಎನ್ನುವ ಭಿನ್ನತೆ ಈಗ ಇಲ್ಲ. ಈಗ ಬೇರೆ ದೃಷ್ಟಿಯಲ್ಲಿಯೇ ನೋಡುತ್ತಿದ್ದೇವೆ. ಟೀವಿ ಕೂಡ ತುಂಬ ಪ್ರಭಾವಿಯಾಗಿದೆ. ಅಲ್ಲಿ– ಇಲ್ಲಿ ಎನ್ನದೆ ಎರಡನ್ನೂ ನಿಭಾಯಿಸಿಕೊಂಡು ಹೋಗುವುದು ಖುಷಿಯ ಸಂಗತಿ.

◆ **ಯಾವುದೇ ಅವಕಾಶ ಸಿಕ್ಕರೆ ಯಾವ ಕಾರಣಗಳಿಂದ ಅದನ್ನು ಒಪ್ಪುತ್ತೀರಿ?**

ಸಿನಿಮಾ ಯಾವುದೇ ಇರಲಿ ಮೊದಲು ಸ್ಕ್ರಿಪ್ಟ್ ಮುಖ್ಯ ಆಗುತ್ತದೆ. ಒಳ್ಳೆಯ ಸ್ಕ್ರಿಪ್ಟ್ ಇದ್ದ ಮಾತ್ರಕ್ಕೆ ಪಾತ್ರವನ್ನು ಒಪ್ಪುವುದಿಲ್ಲ. ಆ ಪಾತ್ರ ಚಿಕ್ಕದಿರಬಹುದು ದೊಡ್ಡದಿರಬಹುದು. ಆ ಪಾತ್ರ ಸ್ಕ್ರಿಪ್ಟ್‌ಗೆ ಸಹಾಯ ಮಾಡಬೇಕು. ಅಂದರೆ ಗಮನ ಸೆಳೆಯುವ ಎಳೆಗಳು ಇರಬೇಕು. ಅದಾದ ನಂತರ ಯಾವ ತಂಡ ಮಾಡುತ್ತಿದೆ ಎನ್ನುವುದನ್ನು ಗಮನಿಸುತ್ತೇನೆ. ಈ ಮೂರೂ ಅಂಶಗಳು ಹಿಡಿಸಿದರೆ ಮಾತ್ರ ನಾನು ಮಾಡುತ್ತೇನೆ.

◆ **ಚೆಂದದ ಕನ್ನಡ ಕಲಿತಿದ್ದು ಹೇಗೆ?**

ಮನೆ ಮಾತು ಹಿಂದಿ, ಬೆಂಗಳೂರಿನಲ್ಲಿಯೇ ಓದಿದ್ದೇನೆ. ಗೆಳೆಯರ ಜೊತೆ– ಶಾಲೆಯಲ್ಲಿ ಕನ್ನಡ ಕಲಿತಿದ್ದೇನೆ. ನನಗೆ ಭಾಷೆ ಕಲಿಯುವುದು ಇಷ್ಟ. ತೆಲುಗು, ತಮಿಳು ಕಲಿತಿದ್ದೇನೆ. ಮಲಯಾಳಂ ಸಂಪೂರ್ಣ ಕಲಿಯಲು ಸಾಧ್ಯ ಆಗಿಲ್ಲ. ಇಂಗ್ಲಿಷ್ ಓದಿಗೆ ವ್ಯವಹಾರದ ಕಾರಣಕ್ಕೆ ಕಲಿತಿದ್ದೇನೆ. ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದಿದ್ದೇನೆ ಇತ್ತೀಚೆಗೆ ಚೆನ್ನೈಗೆ ಬಂದು ನೆಲೆಸಿದ್ದೇನೆ. ಮದುವೆಯಾದ ಮೇಲೆ ಇಲ್ಲಿಗೆ ಬರುವುದು ಅನಿವಾರ್ಯ ಆಯಿತು. ಆರಂಭದಲ್ಲಿ ವಾಯುಗುಣ ಬೆಂಗಳೂರಿನಷ್ಟು ಹಿತ ಅನ್ನಿಸಲಿಲ್ಲ. ಇದು ಪತಿ ಮನೆಯಾದರೆ ಬೆಂಗಳೂರು ತವರು ಮನೆ. ಆಕಡೆ ಈಕಡೆ ಓಡಾಟ ಇದ್ದೇ ಇರುತ್ತದೆ.

■ **ರಾಘವೇಂದ್ರ ಕೆ.**